


**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2021; 7(8): 358-363
www.allresearchjournal.com
Received: 19-06-2021
Accepted: 22-07-2021

**ಡಾ. ಎಂ ಚಿಕ್ಕಣ್ಣ**
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು,
ಕನ್ನಡ ಭಾಷಾ ವಿಭಾಗ,
ಎಸ್.ಡಿ.ಯು.ಐ.ಎಂ., ದೊಡ್ಡಬಳ್ಳಾಪುರ,
ಕರ್ನಾಟಕ, ಭಾರತ

**Corresponding Author:**
**ಡಾ. ಎಂ ಚಿಕ್ಕಣ್ಣ**
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು,
ಕನ್ನಡ ಭಾಷಾ ವಿಭಾಗ,
ಎಸ್.ಡಿ.ಯು.ಐ.ಎಂ., ದೊಡ್ಡಬಳ್ಳಾಪುರ,
ಕರ್ನಾಟಕ, ಭಾರತ

# ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪಠ್ಯದ ಸೂಕ್ಷ್ಮತೆ ಮತ್ತು ವಿದ್ಯಾರ್ಥಿಗಳು

**ಡಾ. ಎಂ ಚಿಕ್ಕಣ್ಣ**

## ಪೀಠಿಕೆ
ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 2019 ರಲ್ಲಿ ಹೊಸ ಶಿಕ್ಷಣ ನೀತಿಗೆ ಸಂಬಂಧಪಟ್ಟ ಕರಡನ್ನು ಬಿಡುಗಡೆ ಮಾಡಲಾಯಿತು. ಈ ಹೊಸ ಶಿಕ್ಷಣ ನೀತಿಯ ಕರಡು ಬಿಡುಗಡೆಯಾದ ನಂತರ ಈ ಕುರಿತಾದ ಹಲವಾರು ಸಾರ್ವಜನಿಕ ಸಮಾಲೋಚನೆಗಳು, ಚರ್ಚೆಗಳು, ಕಾರ್ಯಾಗಾರಗಳು,ಉಪನ್ಯಾಸಗಳು ನಡೆದವು. ಸಾರ್ವಜನಿಕ ಸಮಾಲೋಚನಗಳು, ಚರ್ಚೆಗಳ ನಂತರ ಹಲವಾರು ಸಲಹೆಗಳನ್ನು ಸ್ವೀಕರಿಸಿ ಅಸ್ತಿತ್ವದಲ್ಲಿರುವ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಪರಿಚಯಿಸುವ ಉದ್ದೇಶದಿಂದ 2020 ರ ಜುಲೈ 29 ರಂದು ಕ್ಯಾಬಿನೆಟ್ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಒಪ್ಪಿಗೆ ಸೂಚಿಸಿತು.

## ಕಲಿಕೆಗೆ ಒತ್ತು
ರಾಷ್ಟ್ರೀಯ ಶಿಕ್ಷಣ ನೀತಿಯು ಅಗತ್ಯ ಕಲಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಹೆಚ್ಚು ಸಮಗ್ರ ಅನುಭವ, ಚರ್ಚಾ–ಆಧಾರಿತ ಮತ್ತು ವಿಶ್ಲೇಷಣೆ. ಆಧಾರಿತ ಕಲಿಕೆಯನ್ನು ಹೆಚ್ಚಿಸಲು ಹಾಗೂ ಪಠ್ಯಕ್ರಮದ ವಿಷಯವನ್ನು ಕಡಿಮೆ ಮಾಡುವ ಯೋಜನೆಯನ್ನು ಚರ್ಚಿಸುತ್ತದೆ. ಮಕ್ಕಳ ಅರಿವಿನ ಬೆಳವಣಿಗೆಯ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಉತ್ತಮಗೊಳಿಸುವ ಉದ್ದೇಶವಾಗಿದೆ.

## ಪಠ್ಯಕ್ರಮ ಮತ್ತು ಶಿಕ್ಷಣ ರಚನೆಯ ವಿನ್ಯಾಸ
ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪಠ್ಯಕ್ರಮ ಮತ್ತು ಶಿಕ್ಷಣ ರಚನೆಯನ್ನು 10 + 2 ವ್ಯವಸ್ಥೆಯಿಂದ ಹಿಡಿದು, 5 + 3 + 3 + 4 ವ್ಯವಸ್ಥೆಯ ವಿನ್ಯಾಸಕ್ಕೆ ಪರಿಷ್ಕರಿಸುವ ಬಗ್ಗೆಯೂ ರಾಷ್ಟ್ರೀಯ ಶಿಕ್ಷಣ ನೀತಿ ಹೇಳುತ್ತದೆ. ಈ ಶಿಕ್ಷಣ ನೀತಿಯು ಪ್ರಾಥಮಿಕ ಶಿಕ್ಷಣವನ್ನು ಉನ್ನತ ಶಿಕ್ಷಣಕ್ಕೆ ಮತ್ತು ಗ್ರಾಮೀಣ ಮತ್ತು ನಗರ ಭಾರತದಲ್ಲಿ ವೃತ್ತಿಪರ ತರಬೇತಿಗೆ ಸಮಗ್ರ ಚೌಕಟ್ಟಾಗಿದೆ ಎನ್ನಬಹುದು. ಈ ನೀತಿಯು 2040 ರ ವೇಳೆಗೆ ಭಾರತದ ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸುವ ಗುರಿಯನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಕೈ ಕೆಸರಾದರೆ ಬಾಯಿ ಮೊಸರು ಎನ್ನುವ ಪರಿಕಲ್ಪನೆಯ ಆಧಾರದ ಮೇಲೆ ಹೊಸ ಶಿಕ್ಷಣ ನೀತಿ ರೂಪಿಸಲಾಗಿದೆ. ಇಷ್ಟು ವರ್ಷಗಳ ಕಾಲ ಬೌದ್ಧಿಕ ಜ್ಞಾನಕ್ಕೆ ಮಾತ್ರ ಮಹತ್ವ ನೀಡಲಾಗಿತ್ತು. ಇದರಿಂದಾಗಿ ಅಸಮತೋಲನ ಸೃಷ್ಟಿಯಾಗಿತ್ತು. ಅದನ್ನು ಬದಲಾಯಿಸಲು, ಹೊಸ ಶಿಕ್ಷಣ ನೀತಿಯಲ್ಲಿ ವಿದ್ಯೆ ಮತ್ತು ತರಬೇತಿ ಎರಡಕ್ಕೂ ಸಮಾನ ಮಹತ್ವ ನೀಡಲಾಗಿದೆ.

## ದೂರದೃಷ್ಟಿ
ರಾಷ್ಟ್ರೀಯ ಶಿಕ್ಷಣ ನೀತಿಯ ದೂರದೃಷ್ಟಿ: ಈ ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತ ಕೇಂದ್ರಿತ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುತ್ತದೆ. ಇದು ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ರಾಷ್ಟ್ರವನ್ನು ಸುಸ್ಥಿರ ಮತ್ತು ಸ್ಪಂದಕ ಜ್ಞಾನ ಸಮಾಜವಾಗಿ ಪರಿವರ್ತಿಸಲು ನೇರವಾಗಿ ಕೊಡುಗೆ ನೀಡುತ್ತದೆ. ಈ ಮೂಲಕ ಭಾರತವನ್ನು ಜಾಗತಿಕ ಜ್ಞಾನದ ಮಹಾಶಕ್ತಿಯನ್ನಾಗಿ ರಾಷ್ಟ್ರೀಯ ಶಿಕ್ಷಣ ನೀತಿ ಮಾಡುತ್ತದೆ ಎಂದರೆ ತಪ್ಪಾಗಲಾರದು.

**ಪಠ್ಯಕ್ರಮ ಮತ್ತು ಶಿಕ್ಷಣ**

ನಮ್ಮ ಪಠ್ಯಕ್ರಮ ಮತ್ತು ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಮೂಲಭೂತ ಕರ್ತವ್ಯಗಳು ಮತ್ತು ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಆಳವಾದ ಗೌರವವನ್ನು ಬೆಳೆಸಬೇಕು. ತಮ್ಮ ದೇಶದೊಂದಿಗೆ ಬಾಂಧವ್ಯ ಹೊಂದಿರಬೇಕು ಮತ್ತು ಬದಲಾಗುತ್ತಿರುವ ಜಗತ್ತಿನಲ್ಲಿ ಪ್ರತಿಯೊಬ್ಬರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ನೀತಿಯು ಸೂಚಿಸುತ್ತದೆ. ವಿದ್ಯಾರ್ಥಿಗಳು ಭಾರತೀಯರಾಗಿರುವುದರ ಬಗ್ಗೆ ಆಳವಾದ ಹೆಮ್ಮೆಯನ್ನು,ಚಿಂತನೆಯಲ್ಲಿ ಮಾತ್ರವಲ್ಲದೆ, ಉದ್ದೇಶ, ಬುದ್ಧಿಶಕ್ತಿ ಮತ್ತು ಕಾರ್ಯಗಳಲ್ಲಿಯೂ ಸಹ ಮೂಡಿಸುವುದು. ಹಾಗೆಯೇ ಮಾನವ ಹಕ್ಕುಗಳನ್ನು, ಸುಸ್ಥಿರ ಅಭಿವೃದ್ಧಿ ಮತ್ತು ಜೀವನ ಹಾಗೂ ಜಾಗತಿಕ ಕ್ಷೇಮವನ್ನು ಬೆಂಬಲಿಸುವ ಜ್ಞಾನ, ಕೌಶಲ್ಯ, ಮೌಲ್ಯಗಳು ಮತ್ತು ನಿಲುವುಗಳು ಬಗ್ಗೆ ಜವಾಬ್ದಾರಿಯುತ ಬದ್ಧತೆ, ತನ್ಮೂಲಕ ನಿಜವಾದ ಜಾಗತಿಕ ನಾಗರಿಕನನ್ನು ಪ್ರತಿಬಿಂಬಿಸುವುದು ಈ ನೀತಿಯ ದೂರದೃಷ್ಟಿಯಾಗಿದೆ.

**ಮೂಲಭೂತ ತತ್ವಗಳು**

ಮುಖ್ಯವಾಗಿ ಶಿಕ್ಷಣ ವ್ಯವಸ್ಥೆ ಹಾಗೂ ವೈಯಕ್ತಿಕ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವ ಪ್ರಮುಖ ಮೂಲಭೂತ ತತ್ವಗಳೆಂದರೆ: ಬಹುಶಿಸ್ತೀಯ ಮತ್ತು ಸಮಗ್ರ ಶಿಕ್ಷಣ– ಶಿಕ್ಷಣದಲ್ಲಿ ಎಲ್ಲಾ ಜ್ಞಾನಗಳ ಏಕತೆಯನ್ನು ಮತ್ತು ಸಮಗ್ರತೆಯನ್ನು ತರಲು ಬಹುಶಿಸ್ತೀಯ ಕಲಿಕೆಗೆ ಪ್ರೋತ್ಸಾಹ ನೀಡುವುದು, ಏಕರೂಪತೆ – ದೇಶದಾದ್ಯಂತ ಶಿಕ್ಷಣದ ಎಲ್ಲಾ ಹಂತಗಳ ಪಠ್ಯಕ್ರಮಗಳಲ್ಲಿ ಏಕರೂಪತೆ ತರುವುದು, ಹೊಂದಿಕೊಳ್ಳುವಿಕೆ– ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಮತ್ತು ಆಸಕ್ತಿಗಳ ಪ್ರಕಾರ ತಮ್ಮದೇ ಆದ ಮಾರ್ಗಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುವುದು, ನೈತಿಕತೆ ಮತ್ತು ಮಾನವ ಮತ್ತು ಸಾಂವಿಧಾನಿಕ ಮೌಲ್ಯಗಳು–ನೀತಿವಂತಿಕೆ ಮತ್ತು ಮಾನವೀಯ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ತರುವುದು, ತಾರ್ಕಿಕ ನಿರ್ಧಾರ ಮತ್ತು ನಾವೀನ್ಯತೆಯನ್ನು ಉತ್ತೇಜಿಸಲು ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಗೆ ಒತ್ತು, ಜೀವನ ಕೌಶಲ್ಯಗಳು– ಸಂವಹನ, ಸಹಕಾರ, ಕೂಡುಗೆಲಸದ ಮನೋಭಾವ ಮತ್ತು ಹೊಂದಿಕೊಳ್ಳುವಿಕೆ ಇತ್ಯಾದಿಗಳು, ಕಲಿಕೆಗಾಗಿ ನಿಯಮಿತ ರಚನಾತ್ಮಕ ಮೌಲ್ಯಮಾಪನಕ್ಕೆ ಗಮನಕೊಡುವುದು, ಅತ್ಯುತ್ತಮ, ಉತ್ತಮ ಗುಣಮಟ್ಟದ ಸಂಶೋಧನೆಗೆ ಪ್ರೋತ್ಸಾಹ,ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನದಲ್ಲಿ ತಂತ್ರಜ್ಞಾನದ ವ್ಯಾಪಕ ಬಳಕೆ, ಏಕತಾನತೆಯ ಶಿಕ್ಷಣ ಮತ್ತು ಪರೀಕ್ಷಾಧಾರಿತ ಶಿಕ್ಷಣ ಬದಲಿಗೆ ಪರಿಕಲ್ಪನಾ ತಿಳುವಳಿಕೆಗೆ ಒತ್ತು ನೀಡುವುದು, ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಾ ಬಳಕೆ ಮತ್ತು ಭಾಷೆಯ ಶಕ್ತಿಯನ್ನು ಉತ್ತೇಜಿಸುವುದು, ಪಠ್ಯಕ್ರಮ, ಶಿಕ್ಷಣ ಮತ್ತು ನೀತಿಗಳಲ್ಲಿ ಸ್ಥಳೀಯ ವೈವಿಧ್ಯತೆ ಮತ್ತು ಪ್ರಾದೇಶಿಕತೆಗೆ ಗೌರವ ನೀಡುವುದು.

**ಗುಣಮಟ್ಟದ ಶಿಕ್ಷಣ**

ಸಂಪೂರ್ಣವಾಗಿ ಸಮತೋಲನ ಮತ್ತು ಅಂತರ್ಗತ ಶಿಕ್ಷಣಕ್ಕೆ ಒತ್ತು ನೀಡುವುದು, ಶಿಕ್ಷಕರು ಮತ್ತು ಅಧ್ಯಾಪಕರು ಕಲಿಕೆಯ ಪ್ರಕ್ರಿಯೆಯ ಜೀವಾಳವಾಗಿರುತ್ತಾರೆ. ಶ್ರೀಮಂತ, ವೈವಿಧ್ಯಮಯ, ಪ್ರಾಚೀನ ಮತ್ತು ಆಧುನಿಕ ಸಂಸ್ಕೃತಿ ಮತ್ತು ಜ್ಞಾನ ವ್ಯವಸ್ಥೆಗಳು ಹಾಗೂ ಸಂಪ್ರದಾಯಗಳನ್ನುಳ್ಳ ಭಾರತದಲ್ಲಿ ನೆಲೆ ಗಟ್ಟಿಗೊಳಿಸುವಿಕೆ ಮತ್ತು ಹೆಮ್ಮೆ ಪಡುವಂತೆ ಮಾಡುವುದು, ಶಿಕ್ಷಣವು ಸಾರ್ವಜನಿಕ ಸೇವೆಯಾಗಿದ್ದು, ಗುಣಮಟ್ಟದ ಶಿಕ್ಷಣ ಪಡೆಯುವುದು ಪ್ರತಿ ಮಗುವಿನ ಮೂಲಭೂತ ಹಕ್ಕಾಗಿದೆ. ಪಠ್ಯಕ್ರಮ, ಶಿಕ್ಷಣಶಾಸ್ತ್ರ, ಮೌಲ್ಯಮಾಪನ, ಮತ್ತು ವಿದ್ಯಾರ್ಥಿ ಬೆಂಬಲಗಳಲ್ಲಿ ಸಮಗ್ರ ಬದಲಾವಣೆ ತರುವುದು, ಬೋಧಕವರ್ಗ ಮತ್ತು ಸಾಂಸ್ಥಿಕ ನಾಯಕತ್ವದ ದೃಢನಿಷ್ಠೆಯನ್ನು ಪುನರುಜ್ಜರಿಸುವುದು ಅಲ್ಲದೆ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಸ್ಥಾಪನೆ ಬಗ್ಗೆ ಕಾಳಜಿ ವಹಿಸುವುದು.

**ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣ**

ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣವು ಎಲ್ಲಾ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳನ್ನು 21ನೇ ಶತಮಾನದ ಸಾಮರ್ಥ್ಯವನ್ನು ಹೊಂದಿರುವ ಸರ್ವಾಂಗೀಣ ವ್ಯಕ್ತಿಗಳನ್ನಾಗಿ ರೂಪಿಸಲು ಸಹಾಯ ಮಾಡುತ್ತದೆ. ಬಹು–ಪ್ರವೇಶ ಮತ್ತು ನಿರ್ಗಮನ ಆಯ್ಕೆಗಳನ್ನು ನೀಡಿ–ಪ್ರಸ್ತುತ ಚಾಲ್ತಿಯಲ್ಲಿರುವ ಕಠಿಣ ಗಡಿಗಳನ್ನು ತೆಗೆದುಹಾಕಲಾಗುವುದು. ಜೀವಿತಾವಧಿಯ ಕಲಿಕೆಗೆ ಹೊಸ ಸಾಧ್ಯತೆಗಳನ್ನು ಸೃಷ್ಟಿಸಲಾಗುವುದು, ಪಠ್ಯಕ್ರಮವನ್ನು ನಿಗದಿಪಡಿಸುವಲ್ಲಿ ಬೋಧಕವರ್ಗ ಮತ್ತು ಸಾಂಸ್ಥಿಕ ಸ್ವಾಯತ್ತತೆಯನ್ನು ಹೆಚ್ಚಿಸುವ ಮೂಲಕ ಪ್ರೋತ್ಸಾಹಿಸಲಾಗುವುದು. ಪದವಿ ಕಾರ್ಯಕ್ರಮಗಳ ರಚನೆ ಮತ್ತು ಅವಧಿಗಳನ್ನು ಬಹು ಪ್ರವೇಶ ಮತ್ತು ನಿರ್ಗಮನ ಆಯ್ಕೆಗಳೊಂದಿಗೆ ಸರಿಹೊಂದಿಸಲಾಗುತ್ತದೆ. ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತ 2035 ರ ವೇಳೆಗೆ ಶೇ.50ಕ್ಕೆ ಹೆಚ್ಚಳ; ಉನ್ನತ ಶಿಕ್ಷಣದಲ್ಲಿ 3.5 ಕೋಟಿ ಸೀಟುಗಳ ಸೇರ್ಪಡೆ. ಉನ್ನತ ಶಿಕ್ಷಣ ವ್ಯಾಸಂಗದಲ್ಲಿ ವಿಷಯಗಳ ಆಯ್ಕೆಯಲ್ಲಿ ನಮ್ಯತೆ. ಸೂಕ್ತ ಪ್ರಮಾಣೀಕರಣದೊಂದಿಗೆ ಬಹು ಪ್ರವೇಶ/ನಿರ್ಗಮನಕ್ಕೆ ಅನುಮತಿ. ಬಲವಾದ ಸಂಶೋಧನಾ ಸಂಸ್ಕೃತಿಯನ್ನು ಉತ್ತೇಜಿಸಲು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಸ್ಥಾಪನೆ. ಉನ್ನತ ಶಿಕ್ಷಣದಲ್ಲಿ ಲಘುವಾದ ಆದರೆ ಬಿಗಿಯಾದ ನಿಯಂತ್ರ; ವಿಭಿನ್ನ ಕಾರ್ಯಗಳಿಗಾಗಿ ನಾಲ್ಕು ಪ್ರತ್ಯೇಕ ಅಂಗಗಳನ್ನು ಹೊಂದಿರುವ ಏಕ ನಿಯಂತ್ರಕ ವ್ಯವಸ್ಥೆ. ಕಾಲೇಜುಗಳಿಗೆ ಶ್ರೇಣೀಕೃತ ಸ್ವಾಯತ್ತತೆಯೊಂದಿಗೆ 15 ವರ್ಷಗಳಲ್ಲಿ ಸಹವರ್ತಿ ವ್ಯವಸ್ಥೆಯನ್ನು ಹಂತಹಂತವಾಗಿ ತೆಗೆದುಹಾಕಲಾಗುವುದು.

ಹೊಸ ಶಿಕ್ಷಣ ನೀತಿ 2020 ಸಮಾನತೆಯೊಂದಿಗೆ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುತ್ತದೆ; ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆಯನ್ನು ರಚಿಸಲಾಗುವುದು. ಹೊಸ ಶಿಕ್ಷಣ ನೀತಿಯು ಲಿಂಗ ಸೇರ್ಪಡೆ ನಿಧಿ, ಹಿಂದುಳಿದ ಪ್ರದೇಶಗಳು ಮತ್ತು ಗುಂಪುಗಳಿಗೆ ವಿಶೇಷ ಶಿಕ್ಷಣ ವಲಯಗಳನ್ನು ಸ್ಥಾಪಿಸಲು ಒತ್ತು ನೀಡುತ್ತದೆ. ಕಲಿಕೆಯ ಫಲಿತಾಂಶಗಳು ಮತ್ತು ಸಾಮರ್ಥ್ಯ ಆಧಾರಿತ ಮೌಲ್ಯಮಾಪನಗಳ ಮಹತ್ವವನ್ನು ಪುನರಾವರ್ತಿತವಾಗಿ ಉಲ್ಲೇಖಿಸಿರುವುದು ಮತ್ತು ಒತ್ತಿ ಹೇಳಿರುವುದು ಅತ್ಯುತ್ತಮವಾಗಿದೆ. ಒಟ್ಟಾರೆ ವಿಧಾನದ ಭಾಗವಾಗಿ ಐಸಿಟಿಯನ್ನು ತರುವುದು –ಮಾಧ್ಯಮಿಕ ಶಾಲೆಯಿಂದ ಕೋಡಿಂಗ್ ಕೌಶಲ್ಯಗಳು ಮತ್ತು ಕೌಶಲ್ಯ ನಿರ್ಮಾಣದಲ್ಲಿ ಗಣಿತದ ಮಹತ್ವವಿದೆ. ಶಾಲಾಪೂರ್ವ 3 ವರ್ಷಗಳ ವ್ಯಾಪ್ತಿಯನ್ನು ಔಪಚಾರಿಕಗೊಳಿಸುವುದು ಸಹ ಒಂದು ಉತ್ತಮ ಹೆಜ್ಜೆಯಾಗಿದೆ. ನೀತಿಯು ಪಠ್ಯಕ್ರಮ, ಸಹಪಠ್ಯ ಮತ್ತು ಪಠ್ಯೇತರವನ್ನು ಮನಬಂದಂತೆ ಮಿಶ್ರಣ ಮಾಡಲು ಉದ್ದೇಶಿಸಿದೆ ಎಂಬ ಅಂಶವನ್ನು ಇಷ್ಟಪಟ್ಟಿದ್ದಾರೆ. ಶಾಲೆಗಳಾದ್ಯಂತ ನಮ್ಮ ಯುವಕರ ಕೌಶಲ್ಯಗಳ ಮೇಲೆ ಇದು ನಿಜವಾಗಿಯೂ ಪರಿಣಾಮ ಬೀರುತ್ತದೆ. ಆನ್‌ಲೈನ್ ಕಲಿಕೆಯ ಪ್ರಾಮುಖ್ಯತೆ, ನೀತಿಯಾದ್ಯಂತ ಡಿಜಿಟಲ್

ಫ್ಲಾಟ್‌ಫಾರ್ಮ್‌ಗಳನ್ನು ತರುವುದನ್ನು ಒಳ್ಳೆಯ ಬೆಳವಣಿಗೆ ಎನ್ನಬಹುದು.

**ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿನ ಕೆಲವೊಂದು ಸವಾಲುಗಳು**

ಸಾರ್ವಜನಿಕ ನಿಧಿಯನ್ನು ಜಿಡಿಪಿಯ 6% ಕ್ಕೆ ದ್ವಿಗುಣಗೊಳಿಸಲು ಮತ್ತು ಶಿಕ್ಷಣದ ಒಟ್ಟಾರೆ ಸಾರ್ವಜನಿಕ ವೆಚ್ಚವನ್ನು ಪ್ರಸ್ತುತ 10% ರಿಂದ 20% ಕ್ಕೆ ಹೆಚ್ಚಿಸಲು ಇದು ಶಿಫಾರಸು ಮಾಡುತ್ತದೆ, ಮುಂದಿನ ದಿನಗಳಲ್ಲಿ ಹೆಚ್ಚಿನ ಹಣವು ರಾಜ್ಯಗಳಿಂದ ಬರಬೇಕಾಗಿರುವುದರಿಂದ ಇದು ಕಾರ್ಯಸಾಧ್ಯವಲ್ಲ. ಇದನ್ನು ಕಡ್ಡಾಯಗೊಳಿಸುವ ಯಾವುದೇ ಶಾಸನಾತ್ಮಕ ಅಥವಾ ಸಂವಿಧಾನಾತ್ಮಕ ಕ್ರಮಗಳ ಪ್ರಸ್ತಾಪ ನೀತಿಯಲ್ಲಿಲ್ಲ. ಕಳಪೆ ಗುಣಮಟ್ಟದ ಶಿಕ್ಷಣವು ಅಸಮಾಧಾನಕರ ಕಲಿಕೆಯಲ್ಲಿ ಪರ್ಯವಸಾನವಾಗುತ್ತಿರುವುದು ತುಂಬಾ ಕಳವಳಕಾರಿ ಸಂಗತಿಯಾಗಿದೆ. ಅಸಮರ್ಪಕ ಪಠ್ಯಕ್ರಮ, ತರಬೇತಾದ ಶಿಕ್ಷಕರ ಕೊರತೆ, ಅದಕ್ಷ ಕಲಿಕಾ ಕ್ರಮಗಳು ಶಾಲಾಪೂರ್ವ ಶಿಕ್ಷಣದ ಪ್ರಮುಖ ಸವಾಲುಗಳಾಗಿವೆ. ಶಾಲಾ ಪೂರ್ವ ಶಿಕ್ಷಣವನ್ನು ಮುಗಿಸಿದ ಗಮನಾರ್ಹ ಸಂಖ್ಯೆಯ ಮಕ್ಕಳು ಶಾಲೆಗೆ ಹೋಗುವುದಕ್ಕೆ ಬೇಕಾದ ಭಾಷೆ ಮತ್ತು ಜ್ಞಾನ ಗ್ರಹಣದ ಸಾಮಾರ್ಥ್ಯವನ್ನು ಹೊಂದಿರುವುದಿಲ್ಲ. ಬಹುತೇಕ ಶಾಲಾ ಪೂರ್ವ ಶಿಕ್ಷಕರು ಸೂಕ್ತವಾಗಿ ತರಬೇತಾಗಿರುವುದಿಲ್ಲ. ಹಲವು ಪ್ರಕರಣಗಳಲ್ಲಿ ಶಾಲಾ ಪೂರ್ವ ಪಠ್ಯಕ್ರಮವು ಪ್ರಾಥಮಿಕ ಶಿಕ್ಷಣ ಪಠ್ಯಕ್ರಮದ ಕಡಿಮೆ ಗುಣಮಟ್ಟದ ವಿಸ್ತರಣೆಯೇ ಆಗಿರುತ್ತದೆ. ವಿದ್ಯಾರ್ಥಿಗಳ ಅರ್ಥಪೂರ್ಣ ಒಳಗೊಳ್ಳುವಿಕೆಯ ಅರ್ಥವನ್ನು ಹೊಂದಿಲ್ಲ. ಭಾರತದ ಶ್ರೀಮಂತ ಮತ್ತು ಬಡ ಮಕ್ಕಳ ನಡುವಿನ ಗುಣಮಟ್ಟದ ಶಿಕ್ಷಣದ ಪ್ರವೇಶದ ಅಂತರವನ್ನು ಮುಚ್ಚಲು ಇದು ಪರಿಹಾರಗಳನ್ನು ಒದಗಿಸುವುದನ್ನು ತಪ್ಪಿಸುತ್ತದೆ. ಪ್ರತಿ ಶಾಲೆಯು ನಿರ್ವಹಿಸಬೇಕಾದ ಸಾಮಾನ್ಯ ಕನಿಷ್ಠ ಮಾನದಂಡವನ್ನು ಕರಡು ನಿರ್ದಿಷ್ಟಪಡಿಸಿಲ್ಲ. ಕೆಲವು ಶಾಲೆಗಳಲ್ಲಿನ ಸೌಲಭ್ಯಗಳ ಗುಣಮಟ್ಟ ಕಡಿಮೆಯಾಗುವಂತಹ ಪರಿಸ್ಥಿತಿಗಳನ್ನು ಇದು ಸೃಷ್ಟಿಸುತ್ತದೆ, ಇದು ಬಡ ಮತ್ತು ಶ್ರೀಮಂತರ ನಡುವಿನ ಅಂತರವನ್ನು ಮತ್ತಷ್ಟು ವಿಸ್ತರಿಸುತ್ತದೆ. ಪೋಷಕ ವಿಕೇಂದ್ರೀಕೃತ ಕಾರ್ಯವಿಧಾನಗಳಿಗೆ ಸಾಕಷ್ಟು ಒತ್ತು ನೀಡುತ್ತದೆ. ಆದಾಗ್ಯೂ, ಇದು ಪೂರ್ಣ ಸಮಯದ ಚಟುವಟಿಕೆಯಾಗಿದ್ದರೂ ಇದಕ್ಕಾಗಿ ಯಾವುದೇ ಪ್ರತ್ಯೇಕ ಹಣವನ್ನು ಮೀಸಲಿಡಲಾಗಿಲ್ಲ ಮತ್ತು ಅದಕ್ಕೆ ಅನುಗುಣವಾಗಿ ಸಿಬ್ಬಂದಿ ಮತ್ತು ಸಂಪನ್ಮೂಲವನ್ನು ಪಡೆಯುವುದು ಉತ್ತಮ. ಅಸಂತೃಪ್ತಿಕರ ಗುಣಮಟ್ಟಕ್ಕೆ ಹಲವಾರು ಕಾರಣಗಳು ಅವುಗಳೆಂದರೆ ಈಗಿರುವ ಶಾಲೆಗಳಲ್ಲಿ ಬಹುತೇಕ ಶಾಲೆಗಳು ಒಂದು ಶಾಲೆಗೆ ಇರಬೇಕೆಂದು ಸೂಚಿಸಿದ ಗುಣಮಟ್ಟಗಳು ಮತ್ತು ನಿಯಮಗಳನ್ನು ಅನುಸರಿಸದೇ ಇರುವುದು; ವಿದ್ಯಾರ್ಥಿ ಮತ್ತು ಶಿಕ್ಷಕರ ಗೈರು ಹಾಜರು, ಶಿಕ್ಷಕರ ಉತ್ತೇಜನದ ಮತ್ತು ತರಬೇತಿ ವಿಷಯದಲ್ಲಿ ಗಂಬೀರ ಕೊರತೆಗಳು, ಇದರ ಪರಿಣಾಮವಾಗಿ ಶಿಕ್ಷಣ ಗುಣಮಟ್ಟ ಮತ್ತು ಕಾರ್ಯಕ್ಷಮತೆಯಲ್ಲಿ ಕೊರತೆಗಳು. ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನದ ತಂತ್ರಜ್ಞಾನಗಳನ್ನು ಬಳಸುವಲ್ಲಿನ ನಿಧಾನಗತಿಯ ಪ್ರಗತಿ, ಸಿಬ್ಬಂದಿಗಳನ್ನು ಅಗತ್ಯ ಪ್ರಮಾಣಕ್ಕಿಂತ ಕಡಿಮೆಮಟ್ಟದಲ್ಲಿ ನಿರ್ವಹಿಸುವುದು, ಕಾರ್ಯಕ್ಷಮತೆಯ ಮೇಲ್ವಿಚಾರಣೆಯ ಕಡೆಗೆ ಗಮನ ಮುಂತಾದವುಗಳು. ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಸರ್ಕಾರಿ ವ್ಯವಸ್ಥೆಯಲ್ಲಿ ಇರುವ ಶಾಲೆಗಳು ವಿಫಲವಾಗಿರುವುದರಿಂದ ಭಾರೀ ಪ್ರಮಾಣದಲ್ಲಿ ಖಾಸಗಿ ಶಾಲೆಗಳು ಪ್ರವೇಶಿಸುವುದಕ್ಕೆ ಕಾರಣವಾಗಿವೆ. ಈ ಶಾಲೆಗಳಲ್ಲಿ ಬಹುತೇಕ ಶಾಲೆಗಳು ಮೂಲ ಸೌಕರ್ಯದ ಕೊರತೆ, ಕಲಿಕೆಯ ವಾತಾವರಣದ ಕೊರತೆ ಮತ್ತು ದಕ್ಷ ಶಿಕ್ಷಕರ ಕೊರತೆಯನ್ನು ಎದುರಿಸುತ್ತಿದೆ. ಭಾರೀ ಪ್ರಮಾಣದಲ್ಲಿ ಇರುವ ಉನ್ನತ ಶಿಕ್ಷಣದಲ್ಲಿ ಗುಣಮಟ್ಟಗಳನ್ನು ಹೆಚ್ಚಿಸುವುದಕ್ಕಾಗಿ ಮತ್ತು ಇಂಥ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲೆಂದು 1994ರಲ್ಲಿ ಭಾರತದಲ್ಲಿ ಅಕ್ರೆಡಿಟೇಶನ್ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ನ್ಯಾಷನಲ್ ಅಸೆಸ್ ಮೆಂಟ್ ಎಂಡ್ ಅಕ್ರೆಡಿಟೇಶನ್ ಕೌನ್ಸಿಲ್ (ನ್ಯಾಕ್) ಗುಣಮಟ್ಟದ ಖಾತ್ರಿ ನೀಡಿದ1 40 ವಿಶ್ವವಿದ್ಯಾಲಯಗಳ ಪೈಕಿ ಕೇವಲ ಶೇಕಡ 32ರಷ್ಟು ವಿವಿಗಳು ಎ ಶ್ರೇಣಿಯನ್ನು ಹೊಂದಿದ್ದವು. ನ್ಯಾಕ್ ಶ್ರೇಣೀಕೃತಗೊಳಿಸಿದ 2789 ಕಾಲೇಜುಗಳಲ್ಲಿ ಶೇಕಡ 7 ರಷ್ಟು ಕಾಲೇಜುಗಳು ಮಾತ್ರ ಎ ಶ್ರೇಣಿಯನ್ನು ಪಡೆದಿವೆ. ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಅಣಬೆಗಳಂತೆ ಬೆಳೆದಿದ್ದು. ಹಲವು ಸಂಸ್ಥೆಗಳು ಕಳಪೆ ಗುಣಮಟ್ಟದ್ದಾಗಿವೆ. ಉನ್ನತ ಶಿಕ್ಷಣದ ಉಪರಂಗವು ಅರ್ಹತೆಯನ್ನು ಹೊಂದಿದ ಶಿಕ್ಷಕ ಸಿಬ್ಬಂದಿಯ ನೇಮಖಾತಿಯಾಗದೆ ಕೊರತೆಯನ್ನು ಎದುರಿಸುತ್ತಿದೆ. ಹಲವು ಖಾಸಗಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ರಂಗದ ಶಿಕ್ಷಣ ಸಂಸ್ಥೆಗಳು ಕಳಪೆ ಮೂಲ ಸೌಕರ್ಯವನ್ನು ಹೊಂದಿವೆ. ವೈವಿದ್ಯಮಯ ಆರ್ಥಿಕತೆಗೆ ಉನ್ನತ ಶಿಕ್ಷಣ ಪಠ್ಯಕ್ರಮವನ್ನು ಪರಿಷ್ಕರಿಸುವ ಕೆಲಸವೂ ನಿಧಾನಗತಿಯಲ್ಲಿ ನಡೆಯುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ ನೀಡುವ ನಿಧಿಯ ಪ್ರಮಾಣವು ಸೂಕ್ತವಾಗಿಲ್ಲ. ಶಾಲಾ ಪೂರ್ವ ಮಕ್ಕಳನ್ನು ಸೇರಿಸಲು ಆರ್‌ಟಿಇ ಕಾಯ್ದೆಯಡಿ ವ್ಯಾಪ್ತಿಯನ್ನು ವಿಸ್ತರಿಸುವುದು ಅತ್ಯಂತ ಮುಖ್ಯ, ಆದರೆ ಮೂಲಸೌಕರ್ಯ ಮತ್ತು ಶಿಕ್ಷಕರ ಖಾಲಿ ಹುದ್ದೆಗಳ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಅದನ್ನು ಕ್ರಮೇಣ ಪರಿಚಯಿಸಬೇಕು. ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸುವ ಪ್ರಸ್ತಾಪಕ್ಕೆ ಈಗಿರುವ ಸರಕಾರಿ ಅಂಗನವಾಡಿ, ಶಾಲಾಕಾಲೇಜುಗಳ ಹಾಗೂ ಅಲ್ಲಿನ ಶಿಕ್ಷಕರ ಸಂಖ್ಯೆಯ ಜೊತೆಗೆ ಗುಣಮಟ್ಟವನ್ನು ಹೆಚ್ಚಿಸುವ ನೀತಿ ಹಾಗೂ ಸಂಪನ್ಮೂಲ ಅಗತ್ಯವಿತ್ತು. ಆದರೆ ಹತ್ತಿರದಲ್ಲಿರುವ ಶಾಲೆಗಳನ್ನು ಮುಚ್ಚಿ ಹತ್ತು ಕಿ.ಮೀ ದೂರದಲ್ಲಿ ಹಾಗೂ ಅಂಗನವಾಡಿಗಳಿರುವ ಕ್ಲಸ್ಟರ್ ಸೃಷ್ಟಿಸುವ ಪ್ರಸ್ತಾಪವನ್ನು ಮಾಡಿದೆ ಇದರಿಂದ ಗ್ರಾಮೀಣ ಭಾಗದ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಮಕ್ಕಳ ಹಾಜರಾತಿಯಲ್ಲಿ ಕುಂಠಿತಗೊಳ್ಳುವ ಸಾಧ್ಯತೆಯೂ ಇದೆ

ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತ 2035 ರ ವೇಳೆಗೆ ಶೇ.50ಕ್ಕೆ ಹೆಚ್ಚಳ; ಉನ್ನತ ಶಿಕ್ಷಣದಲ್ಲಿ 3.5 ಕೋಟಿ ಸೀಟುಗಳ ಸೇರ್ಪಡೆ. ಉನ್ನತ ಶಿಕ್ಷಣ ವ್ಯಾಸಂಗದಲ್ಲಿ ವಿಷಯಗಳ ಆಯ್ಕೆಯಲ್ಲಿ ನಮ್ಯತೆ. ಸೂಕ್ತ ಪ್ರಮಾಣೀಕರಣದೊಂದಿಗೆ ಬಹು ಪ್ರವೇಶ/ನಿರ್ಗಮನಕ್ಕೆ ಅನುಮತಿ. ಬಲವಾದ ಸಂಶೋಧನಾ ಸಂಸ್ಕೃತಿಯನ್ನು ಉತ್ತೇಜಿಸಲು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ ಸ್ಥಾಪನೆ. ಉನ್ನತ ಶಿಕ್ಷಣದಲ್ಲಿ ಲಘುವಾದ ಆದರೆ ಬಿಗಿಯಾದ ನಿಯಂತ್ರ; ವಿಭಿನ್ನ ಕಾರ್ಯಗಳಿಗಾಗಿ ನಾಲ್ಕು ಪ್ರತ್ಯೇಕ ಅಂಗಗಳನ್ನು ಹೊಂದಿರುವ ಏಕ ನಿಯಂತ್ರಕ ವ್ಯವಸ್ಥೆ. ಕಾಲೇಜುಗಳಿಗೆ ಶ್ರೇಣೀಕೃತ ಸ್ವಾಯತ್ತತೆಯೊಂದಿಗೆ 15 ವರ್ಷಗಳಲ್ಲಿ ಸಹವರ್ತಿ ವ್ಯವಸ್ಥೆಯನ್ನು ಹಂತಹಂತವಾಗಿ ತೆಗೆದುಹಾಕಲಾಗುವುದು. ಹೊಸ ಶಿಕ್ಷಣ ನೀತಿ 2020 ಸಮಾನತೆಯೊಂದಿಗೆ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುತ್ತದೆ; ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆಯನ್ನು ರಚಿಸಲಾಗುವುದು. ಹೊಸ ಶಿಕ್ಷಣ ನೀತಿಯು ಲಿಂಗ ಸೇರ್ಪಡೆ ನಿಧಿ, ಹಿಂದುಳಿದ

ಪ್ರದೇಶಗಳು ಮತ್ತು ಗುಂಪುಗಳಿಗೆ ವಿಶೇಷ ಶಿಕ್ಷಣ ವಲಯಗಳನ್ನು ಸ್ಥಾಪಿಸಲು ಒತ್ತು ನೀಡುತ್ತದೆ. ಕಲಿಕೆಯ ಫಲಿತಾಂಶಗಳು ಮತ್ತು ಸಾಮರ್ಥ್ಯ ಆಧಾರಿತ ಮೌಲ್ಯಮಾಪನಗಳ ಮಹತ್ವವನ್ನು ಪುನರಾವರ್ತಿತವಾಗಿ ಉಲ್ಲೇಖಿಸಿರುವುದು ಮತ್ತು ಒತ್ತಿ ಹೇಳಿರುವುದು ಅತ್ಯುತ್ತಮವಾಗಿದೆ. ಒಟ್ಟಾರೆ ವಿಧಾನದ ಭಾಗವಾಗಿ ಐಸಿಟಿಯನ್ನು ತರುವುದು –ಮಾಧ್ಯಮಿಕ ಶಾಲೆಯಿಂದ ಕೋಡಿಂಗ್ ಕೌಶಲ್ಯಗಳು ಮತ್ತು ಕೌಶಲ್ಯ ನಿರ್ಮಾಣದಲ್ಲಿ ಗಣಿತದ ಮಹತ್ವವಿದೆ. ಶಾಲಾಪೂರ್ವ 3 ವರ್ಷಗಳ ವ್ಯಾಪ್ತಿಯನ್ನು ಔಪಚಾರಿಕಗೊಳಿಸುವುದು ಸಹ ಒಂದು ಉತ್ತಮ ಹೆಜ್ಜೆಯಾಗಿದೆ. ನೀತಿಯು ಪಠ್ಯಕ್ರಮ, ಸಹಪಠ್ಯ ಮತ್ತು ಪಠ್ಯೇತರವನ್ನು ಮನಬಂದಂತೆ ಮಿಶ್ರಣ ಮಾಡಲು ಉದ್ದೇಶಿಸಿದೆ ಎಂಬ ಅಂಶವನ್ನು ಇಷ್ಟಪಟ್ಟಿದ್ದಾರೆ. ಶಾಲೆಗಳಾದ್ಯಂತ ನಮ್ಮ ಯುವಕರ ಕೌಶಲ್ಯಗಳ ಮೇಲೆ ಇದು ನಿಜವಾಗಿಯೂ ಪರಿಣಾಮ ಬೀರುತ್ತದೆ. ಆನ್‌ಲೈನ್ ಕಲಿಕೆಯ ಪ್ರಾಮುಖ್ಯತೆ, ನೀತಿಯಾದ್ಯಂತ ಡಿಜಿಟಲ್ ಫ್ಲಾಟ್‌ಫಾರ್ಮ್‌ಗಳನ್ನು ತರುವುದನ್ನು ಒಳ್ಳೆಯ ಬೆಳವಣಿಗೆ ಎನ್ನಬಹುದು. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿನ ಕೆಲವೊಂದು ಸವಾಲುಗಳು ಸಾರ್ವಜನಿಕ ನಿಧಿಯನ್ನು ಜಿಡಿಪಿಯ 6% ಕ್ಕೆ ದ್ವಿಗುಣಗೊಳಿಸಲು ಮತ್ತು ಶಿಕ್ಷಣದ ಒಟ್ಟಾರೆ ಸಾರ್ವಜನಿಕ ವೆಚ್ಚವನ್ನು ಪ್ರಸ್ತುತ 10% ರಿಂದ 20% ಕ್ಕೆ ಹೆಚ್ಚಿಸಲು ಇದು ಶಿಫಾರಸು ಮಾಡುತ್ತದೆ, ಮುಂದಿನ ದಿನಗಳಲ್ಲಿ ಹೆಚ್ಚಿನ ಹಣವು ರಾಜ್ಯಗಳಿಂದ ಬರಬೇಕಾಗಿರುವುದರಿಂದ ಇದು ಕಾರ್ಯಸಾಧ್ಯವಲ್ಲ. ಇದನ್ನು ಕಡ್ಡಾಯಗೊಳಿಸುವ ಯಾವುದೇ ಶಾಸನಾತ್ಮಕ ಅಥವಾ ಸಂವಿಧಾನಾತ್ಮಕ ಕ್ರಮಗಳ ಪ್ರಸ್ತಾಪ ನೀತಿಯಲ್ಲಿಲ್ಲ. ಕಳಪೆ ಗುಣಮಟ್ಟದ ಶಿಕ್ಷಣವು ಅಸಮಾಧಾನಕರ ಕಲಿಕೆಯಲ್ಲಿ ಪರ್ಯವಸಾನವಾಗುತ್ತಿರುವುದು ತುಂಬಾ ಕಳವಳಕಾರಿ ಸಂಗತಿಯಾಗಿದೆ. ಅಸಮರ್ಪಕ ಪಠ್ಯಕ್ರಮ, ತರಬೇತಾದ ಶಿಕ್ಷಕರ ಕೊರತೆ, ಅದಕ್ಷ ಕಲಿಕಾ ಕ್ರಮಗಳು ಶಾಲಾಪೂರ್ವ ಶಿಕ್ಷಣದ ಪ್ರಮುಖ ಸವಾಲುಗಳಾಗಿವೆ. ಶಾಲಾ ಪೂರ್ವ ಶಿಕ್ಷಣವನ್ನು ಮುಗಿಸಿದ ಗಮನಾರ್ಹ ಸಂಖ್ಯೆಯ ಮಕ್ಕಳು ಶಾಲೆಗೆ ಹೋಗುವುದಕ್ಕೆ ಬೇಕಾದ ಭಾಷೆ ಮತ್ತು ಜ್ಞಾನ ಗ್ರಹಣದ ಸಾಮಾರ್ಥ್ಯವನ್ನು ಹೊಂದಿರುವುದಿಲ್ಲ. ಬಹುತೇಕ ಶಾಲಾ ಪೂರ್ವ ಶಿಕ್ಷಕರು ಸೂಕ್ತವಾಗಿ ತರಬೇತಾಗಿರುವುದಿಲ್ಲ. ಹಲವು ಪ್ರಕರಣಗಳಲ್ಲಿ ಶಾಲಾ ಪೂರ್ವ ಪಠ್ಯಕ್ರಮವು ಪ್ರಾಥಮಿಕ ಶಿಕ್ಷಣ ಪಠ್ಯಕ್ರಮದ ಕಡಿಮೆ ಗುಣಮಟ್ಟದ ವಿಸ್ತರಣೆಯೇ ಆಗಿರುತ್ತದೆ. ವಿದ್ಯಾರ್ಥಿಗಳ ಅರ್ಥಪೂರ್ಣ ಒಳಗೊಳ್ಳುವಿಕೆಯ ಅರ್ಥವನ್ನು ಹೊಂದಿಲ್ಲ. ಭಾರತದ ಶ್ರೀಮಂತ ಮತ್ತು ಬಡ ಮಕ್ಕಳ ನಡುವಿನ ಗುಣಮಟ್ಟದ ಶಿಕ್ಷಣದ ಪ್ರವೇಶದ ಅಂತರವನ್ನು ಮುಚ್ಚಲು ಇದು ಪರಿಹಾರಗಳನ್ನು ಒದಗಿಸುವುದನ್ನು ತಪ್ಪಿಸುತ್ತದೆ. ಪ್ರತಿ ಶಾಲೆಯು ನಿರ್ವಹಿಸಬೇಕಾದ ಸಾಮಾನ್ಯ ಕನಿಷ್ಠ ಮಾನದಂಡವನ್ನು ಕರಡು ನಿರ್ದಿಷ್ಟಪಡಿಸಿಲ್ಲ. ಕೆಲವು ಶಾಲೆಗಳಲ್ಲಿನ ಸೌಲಭ್ಯಗಳ ಗುಣಮಟ್ಟ ಕಡಿಮೆಯಾಗುವಂತಹ ಪರಿಸ್ಥಿತಿಗಳನ್ನು ಇದು ಸೃಷ್ಟಿಸುತ್ತದೆ, ಇದು ಬಡ ಮತ್ತು ಶ್ರೀಮಂತರ ನಡುವಿನ ಅಂತರವನ್ನು ಮತ್ತಷ್ಟು ವಿಸ್ತರಿಸುತ್ತದೆ. ಪೋಷಕ ವಿಕೇಂದ್ರೀಕೃತ ಕಾರ್ಯವಿಧಾನಗಳಿಗೆ ಸಾಕಷ್ಟು ಒತ್ತು ನೀಡುತ್ತದೆ. ಆದಾಗ್ಯೂ, ಇದು ಪೂರ್ಣ ಸಮಯದ ಚಟುವಟಿಕೆಯಾಗಿದ್ದರೂ ಇದಕ್ಕಾಗಿ ಯಾವುದೇ ಪ್ರತ್ಯೇಕ ಹಣವನ್ನು ಮೀಸಲಿಡಲಾಗಿಲ್ಲ ಮತ್ತು ಅದಕ್ಕೆ ಅನುಗುಣವಾಗಿ ಸಿಬ್ಬಂದಿ ಮತ್ತು ಸಂಪನ್ಮೂಲವನ್ನು ಪಡೆಯುವುದು ಉತ್ತಮ. ಅಸಂತೃಪ್ತಿಕರ ಗುಣಮಟ್ಟಕ್ಕೆ ಹಲವಾರು ಕಾರಣಗಳು ಅವುಗಳೆಂದರೆ ಈಗಿರುವ ಶಾಲೆಗಳಲ್ಲಿ ಬಹುತೇಕ ಶಾಲೆಗಳು ಒಂದು ಶಾಲೆಗೆ ಇರಬೇಕೆಂದು ಸೂಚಿಸಿದ ಗುಣಮಟ್ಟಗಳು ಮತ್ತು ನಿಯಮಗಳನ್ನು ಅನುಸರಿಸದೇ ಇರುವುದು; ವಿದ್ಯಾರ್ಥಿ ಮತ್ತು ಶಿಕ್ಷಕರ ಗೈರು ಹಾಜರು, ಶಿಕ್ಷಕರ ಉತ್ತೇಜನದ ಮತ್ತು ತರಬೇತಿ ವಿಷಯದಲ್ಲಿ ಗಂಬೀರ ಕೊರತೆಗಳು, ಇದರ ಪರಿಣಾಮವಾಗಿ ಶಿಕ್ಷಣ ಗುಣಮಟ್ಟ ಮತ್ತು ಕಾರ್ಯಕ್ಷಮತೆಯಲ್ಲಿ ಕೊರತೆಗಳು. ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನದ ತಂತ್ರಜ್ಞಾನಗಳನ್ನು ಬಳಸುವಲ್ಲಿನ ನಿಧಾನಗತಿಯ ಪ್ರಗತಿ, ಸಿಬ್ಬಂದಿಗಳನ್ನು ಅಗತ್ಯ ಪ್ರಮಾಣಕ್ಕಿಂತ ಕಡಿಮೆಮಟ್ಟದಲ್ಲಿ ನಿರ್ವಹಿಸುವುದು, ಕಾರ್ಯಕ್ಷಮತೆಯ ಮೇಲ್ವಿಚಾರಣೆಯ ಕಡೆಗೆ ಗಮನ ಮುಂತಾದವುಗಳು. ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಸರ್ಕಾರಿ ವ್ಯವಸ್ಥೆಯಲ್ಲಿ ಇರುವ ಶಾಲೆಗಳು ವಿಫಲವಾಗಿರುವುದರಿಂದ ಭಾರೀ ಪ್ರಮಾಣದಲ್ಲಿ ಖಾಸಗಿ ಶಾಲೆಗಳು ಪ್ರವೇಶಿಸುವುದಕ್ಕೆ ಕಾರಣವಾಗಿವೆ. ಈ ಶಾಲೆಗಳಲ್ಲಿ ಬಹುತೇಕ ಶಾಲೆಗಳು ಮೂಲ ಸೌಕರ್ಯದ ಕೊರತೆ, ಕಲಿಕೆಯ ವಾತಾವರಣದ ಕೊರತೆ ಮತ್ತು ದಕ್ಷ ಶಿಕ್ಷಕರ ಕೊರತೆಯನ್ನು ಎದುರಿಸುತ್ತಿದೆ. ಭಾರೀ ಪ್ರಮಾಣದಲ್ಲಿ ಇರುವ ಉನ್ನತ ಶಿಕ್ಷಣದಲ್ಲಿ ಗುಣಮಟ್ಟಗಳನ್ನು ಹೆಚ್ಚಿಸುವುದಕ್ಕಾಗಿ ಮತ್ತು ಇಂಥ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲೆಂದು 1994ರಲ್ಲಿ ಭಾರತದಲ್ಲಿ ಅಕ್ರೆಡಿಟೇಶನ್ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ನ್ಯಾಷನಲ್ ಅಸೆಸ್ ಮೆಂಟ್ ಎಂಡ್ ಅಕ್ರೆಡಿಟೇಶನ್ ಕೌನ್ಸಿಲ್ (ನ್ಯಾಕ್) ಗುಣಮಟ್ಟದ ಖಾತ್ರಿ ನೀಡಿದ1 40 ವಿಶ್ವವಿದ್ಯಾಲಯಗಳ ಪೈಕಿ ಕೇವಲ ಶೇಕಡ 32ರಷ್ಟು ವಿವಿಗಳು ಎ ಶ್ರೇಣಿಯನ್ನು ಹೊಂದಿದ್ದವು. ನ್ಯಾಕ್ ಶ್ರೇಣೀಕೃತಗೊಳಿಸಿದ 2789 ಕಾಲೇಜುಗಳಲ್ಲಿ ಶೇಕಡ 7 ರಷ್ಟು ಕಾಲೇಜುಗಳು ಮಾತ್ರ ಎ ಶ್ರೇಣಿಯನ್ನು ಪಡೆದಿವೆ. ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಅಣಬೆಗಳಂತೆ ಬೆಳೆದಿದ್ದು. ಹಲವು ಸಂಸ್ಥೆಗಳು ಕಳಪೆ ಗುಣಮಟ್ಟದ್ದಾಗಿವೆ. ಉನ್ನತ ಶಿಕ್ಷಣದ ಉಪರಂಗವು ಅರ್ಹತೆಯನ್ನು ಹೊಂದಿದ ಶಿಕ್ಷಕ ಸಿಬ್ಬಂದಿಯ ನೇಮಖಾತಿಯಾಗದೆ ಕೊರತೆಯನ್ನು ಎದುರಿಸುತ್ತಿದೆ. ಹಲವು ಖಾಸಗಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ರಂಗದ ಶಿಕ್ಷಣ ಸಂಸ್ಥೆಗಳು ಕಳಪೆ ಮೂಲ ಸೌಕರ್ಯವನ್ನು ಹೊಂದಿವೆ. ವೈವಿಧ್ಯಮಯ ಆರ್ಥಿಕತೆಗೆ ಉನ್ನತ ಶಿಕ್ಷಣ ಪಠ್ಯಕ್ರಮವನ್ನು ಪರಿಷ್ಕರಿಸುವ ಕೆಲಸವೂ ನಿಧಾನಗತಿಯಲ್ಲಿ ನಡೆಯುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ ನೀಡುವ ನಿಧಿಯ ಪ್ರಮಾಣವು ಸೂಕ್ತವಾಗಿಲ್ಲ. ಶಾಲಾ ಪೂರ್ವ ಮಕ್ಕಳನ್ನು ಸೇರಿಸಲು ಆರ್‌ಟಿಇ ಕಾಯ್ದೆಯಡಿ ವ್ಯಾಪ್ತಿಯನ್ನು ವಿಸ್ತರಿಸುವುದು ಅತ್ಯಂತ ಮುಖ್ಯ, ಆದರೆ ಮೂಲಸೌಕರ್ಯ ಮತ್ತು ಶಿಕ್ಷಕರ ಖಾಲಿ ಹುದ್ದೆಗಳ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಅದನ್ನು ಕ್ರಮೇಣ ಪರಿಚಯಿಸಬೇಕು. ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚಿಸುವ ಪ್ರಸ್ತಾಪಕ್ಕೆ ಈಗಿರುವ ಸರಕಾರಿ ಅಂಗನವಾಡಿ, ಶಾಲಾಕಾಲೇಜುಗಳ ಹಾಗೂ ಅಲ್ಲಿನ ಶಿಕ್ಷಕರ ಸಂಖ್ಯೆಯ ಜೊತೆಗೆ ಗುಣಮಟ್ಟವನ್ನು ಹೆಚ್ಚಿಸುವ ನೀತಿ ಹಾಗೂ ಸಂಪನ್ಮೂಲ ಅಗತ್ಯವಿತ್ತು. ಆದರೆ ಹತ್ತಿರದಲ್ಲಿರುವ ಶಾಲೆಗಳನ್ನು ಮುಚ್ಚಿ ಹತ್ತು ಕಿ.ಮೀ ದೂರದಲ್ಲಿ ಹಾಗೂ ಅಂಗನವಾಡಿಗಳಿರುವ ಕ್ಲಸ್ಟರ್ ಸೃಷ್ಟಿಸುವ ಪ್ರಸ್ತಾಪವನ್ನು ಮಾಡಿದೆ ಇದರಿಂದ ಗ್ರಾಮೀಣ ಭಾಗದ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಮಕ್ಕಳ ಹಾಜರಾತಿಯಲ್ಲಿ ಕುಂಠಿತಗೊಳ್ಳುವ ಸಾಧ್ಯತೆಯೂ ಇದೆ ಅಶಿಕ್ಷಕತರ ಸಂಖ್ಯೆಯನ್ನು ತಗ್ಗಿಸುವುದರಲ್ಲಿ ಕಾಣುತ್ತಿರುವ ನಿಧಾನಗತಿಯ ಪ್ರಗತಿಯು ಈಗಲೂ ಒಂದು ಕಳವಳದ ಸಂಗತಿಯಾಗಿದೆ. ಭಾರತವು ಪ್ರಸ್ತುತ ಜಗತ್ತಿನಲ್ಲಿಯೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಅಶಿಕ್ಷಿತರನ್ನು ಹೊಂದಿರುವ ದೇಶವಾಗಿದೆ.ರಾಷ್ಟ್ರೀಯ ಶಿಕ್ಷಣ ಆಯೋಗ ಸ್ಥಾಪಿಸುವುದರಿಂದ

ಅನೇಕ ಆಡಳಿತಾತ್ಮಕ ಸಮಸ್ಯೆಗಳು ಎದುರಾಗುತ್ತವೆ. ವೈದ್ಯಕೀಯ ಅಥವಾ ಕೃಷಿ ಅಥವಾ ಕಾನೂನು ಶಿಕ್ಷಣವನ್ನು ಒಂದೇ ಸೂರಿನಡಿಯಲ್ಲಿ ತರುವುದು ತೀವ್ರ ವಿರೋಧವನ್ನು ಎದುರಿಸಬೇಕಾಗುತ್ತದೆ. ನಿರೀಕ್ಷಿತ ಬದಲಾವಣೆಗಳ ಸಂಪೂರ್ಣ ಪ್ರಮಾಣ, ಕ್ಷಿಪ್ರ ವೇಳಾಪಟ್ಟಿ, ಶಿಕ್ಷಣ ನೀತಿಯ ಮೇಲೆ ರಾಜ್ಯಗಳನ್ನು ಕೈಗೆತ್ತಿಕೊಳ್ಳಲು ಬಲವಾದ ಕಾರ್ಯವಿಧಾನದ ಅನುಪಸ್ಥಿತಿ ಮತ್ತು ಅಸಮರ್ಪಕ ಬಜೆಟ್ ಈ ನೀತಿಯ ಸಂಪೂರ್ಣ ಅನುಷ್ಠಾನದ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎನ್ನಬಹುದು.. ಇಂಗ್ಲಿಷ್ ಭಾಷೆಯನ್ನು ಕೌಶಲ್ಯವಾಗಿ ಕಲಿಯುವ ಮಹತ್ವವನ್ನು ನಿರ್ಲಕ್ಷಿಸುವುದು. ಬಿ.ಎಡ್. ಪ್ರೋಗ್ರಾಂ ನಿಜವಾಗಿಯೂ ಪ್ರಸ್ತುತತೆಯನ್ನು ಕಳೆದುಕೊಂಡಿದೆ. ಅದನ್ನು ಅನೇಕ ವಿಧದ ಬಿ.ಎಡ್ ಆಗಿ ಪುನರುಜ್ಜೀವನಗೊಳಿಸುವ ಮತ್ತು ಆದರೆ ಇದನ್ನು ಹೇಗೆ ಬಳಸಲಾಗುತ್ತದೆ ಎಂದು ಊಹಿಸಿಕೊಳ್ಳುವುದು ಕಷ್ಟ. ಶಾಲೆಗಳಲ್ಲಿ ಡಿಜಿಟಲ್ ಮೂಲಸೌಕರ್ಯವನ್ನು ಹೇಗೆ ಹೆಚ್ಚಿಸಲಾಗುವುದು ಎಂಬುದರ ಬಗ್ಗೆ ಸ್ಪಷ್ಟ ಉಲ್ಲೇಖವೂ ಸಹ ಇಲ್ಲ. ಕೌಶಲ್ಯ ಮತ್ತು ಉದ್ಯೋಗಾರ್ಹತೆಯಲ್ಲಿ ಭಾರತವು ಪ್ರಪಂಚದಲ್ಲೆ ಅತಿ ಹೆಚ್ಚು ಅಭಿವೃದ್ಧಿಪರ ದೇಶಗಳಲ್ಲಿ ಒಂದಾಗಿದೆ. ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ 54 ಕ್ಕಿಂತ ಹೆಚ್ಚುಜನರು 25 ವರ್ಷಗಳಿಗಿಂತ ಕಡಿಮೆ ವಯಸ್ಸಿನವನವರಾಗಿದ್ದಾರೆ. ಈ ಅಂಶವು ಈ ದೇಶದ ಯುವ ಸಮುದಾಯವು ಶಿಕ್ಷಣ ಮತ್ತು ತರಬೇತಿಯ ಮೂಲಕ ಕಾರ್ಮಿಕ ಬಲವನ್ನು ಪ್ರವೇಶಿಸುವ ಕೌಶಲ್ಯ ಮತ್ತು ಜ್ಞಾನವನ್ನು ಹೊಂದಿ ಸನ್ನದ್ಧರಾಗಿರಬೇಕು. ಹೀಗಿದ್ದೂ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಕಾರ್ಯಕ್ರಮಗಳನ್ನು ಬೆಂಬಲಿಸುವ ಸಾಂಸ್ಥಿಕ ವ್ಯವಸ್ಥೆಗಳು ಸಮರ್ಪಕವಾಗಬೇಕಿದೆ. ಉದ್ದೇಶಿತ ಗುರಿಗಳನ್ನು ತಲುಪಲು ಹಾಗೂ ಕಾರ್ಯತಂತ್ರಗಳನ್ನು ಯಶಸ್ವಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರಿ ಮನೋಭಾವದ ಸ್ಪೂರ್ತಿಯೊಂದಿಗೆ ಕೈಜೋಡಿಸಿ ಕೆಲಸಮಾಡಬೇಕಿದೆ. ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶವೂ ತನ್ನ ಪ್ರಾದೇಶಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಗತ್ಯತೆಗಳಿಗೆ ಸೂಕ್ತವಾದ ಕಾರ್ಯಚರಣೆಯ ರೂಪುರೇಷೆಯನ್ನು ಸೂತ್ರೀಕರಿಸುವುದು ಅನಿವಾರ್ಯ ಹಾಗೂ ಪ್ರಶಸ್ತವಾದ ವಿಚಾರವಾಗಿದೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಮತ್ತು ಸಾಮುದಾಯಿಕ ಭಾಗವಹಿಸುವಿಕೆಯ ಹಿನ್ನಲೆ ಹಾಗೂ ದೂರದೃಷ್ಟಿಯಿಂದ ಕಾರ್ಯತಂತ್ರಗಳನ್ನು ನಿಗದಿಗೊಳಿಸುವ ಪ್ರಕ್ರಿಯೆಯು ಅತ್ಯಂತ ಕೆಳಹಂತದವರೆಗೂ ತಲುಪಿ ಪ್ರತಿಯೊಂದು ಜಿಲ್ಲೆ ಹಾಗೂ ಬ್ಲಾಕ್ ಕೂಡ ತನ್ನದೇ ಆದ ಕಾರ್ಯಾಚರಣೆಯ ರೂಪುರೇಷೆಯನ್ನು ಸೂತ್ರೀಕರಿಸಿ ಅಳವಡಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ. ಅಂತೆಯೇ ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ತನ್ನದೇ ಆದ ಸೂಕ್ಷ್ಮ ಹಂತದ ಕ್ರಿಯಾಯೋಜನೆಯನ್ನು ತಯಾರಿಸಿ ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಸರ್ಕಾರಿ ಯಂತ್ರ, ಖಾಸಗಿ ವಲಯ, ಎಲ್ಲ ಸರ್ಕಾರೇತರ ಸಂಸ್ಥೆಗಳು ಮತ್ತು ದೇಶ ಒಂದಾಗಿ ಶಿಕ್ಷಣಕ್ಕೆ ಸಂಪನ್ಮೂಲವನ್ನು ಒದಗಿಸುವ ರಾಷ್ಟ್ರೀಯ ಜವಾಬ್ದಾರಿಗೆ ಸಹಾಯ ಹಸ್ತ ನೀಡಬೇಕಿದೆ. ಆದುದರಿಂದ ಮಿತವ್ಯಯ ಹಾಗೂ ಜವಾಬ್ದಾರಿಯುತ ಖರ್ಚಿನ ಸಂಸ್ಕೃತಿಯು ಶಿಕ್ಷಣ ವ್ಯವಸ್ಥೆಯನ್ನು ಮುನ್ನೆಡೆಸಬೇಕಾಗಿದೆ. ಅನುಷ್ಠಾನದ ರೂಪುರೇಷೆಗಳನ್ನು ರಚಿಸುವಾಗ ಶಿಕ್ಷಣ ಹಾಗೂ ಇತರ ಸಂಬಂಧಿತ ಕ್ಷೇತ್ರಗಳಾದ ಶಿಶುಪಾಲನೆ, ಪೌಷ್ಠಿಕಾಂಶ, ಆರೋಗ್ಯ, ಕ್ರೀಢೆ, ನೈರ್ಮಲ್ಯ ಮತ್ತು ನೀರು ಪೂರೈಕೆ ಇತ್ಯಾದಿ ಕ್ಷೇತ್ರಗಳ ನಡುವಿನ ಸಂಬಂಧದ ಅಂಶಗಳನ್ನೂ ಸಮರ್ಪಕವಾಗಿ ಅಳವಡಿಸಿಕೊಂಡು ಎಲ್ಲ ಕ್ಷೇತ್ರಗಳಲ್ಲೂ ಸಮಾನವಾದ ಫಲಿತಾಂಶಗಳನ್ನು ಕಾಣುವ ಆಶ್ವಾಸನೆಯೊಂದಿಗೆ ಕೆಲಸ ಮಾಡಲಾಗುತ್ತದೆ. ಸಂಬಂಧಿತ ಹಲವಾರು ಸಂಸ್ಥೆಗಳು, ಶಿಕ್ಷಣ ಇಲಾಖೆ ಹಾಗೂ ಇತರ ಇಲಾಖೆಗಳ ನಡುವೆ ಸಮರ್ಪಕವಾದ ತಾಳಮೇಳದ ಅಗತ್ಯವಿರುವುದರಿಂದ ಅದನ್ನು ಸಾಧಿಸಲು ಬೇಕಾದ ಹೊಂದಾಣಿಕೆಗಳ ತಂತ್ರಗಳನ್ನು ಅಭಿವೃದ್ಧಿಪಡಿಸುವುದು. ಸಮರ್ಪಕವಾದ ಹೊಸ ಸೂಕ್ತ ಉಸ್ತುವಾರಿ, ತಂತ್ರಗಳು ಮತ್ತು ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವುದು ಪ್ರತಿಯೊಂದು ಕಾರ್ಯ ನಿರ್ವಾಹಕ ಘಟಕದ ಪ್ರಯತ್ನವಾಗಬೇಕು. ಇದರಿಂದ ಪ್ರತಿಯೊಂದು ಕಾರ್ಯ ವಿಧಾನದ ನಿಯತ ಕಾಲಿಕ ಮೌಲ್ಯಮಾಪನ ಸಾಧ್ಯವಾಗಲಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡರಲ್ಲಿಯೂ ಸೂಕ್ಷ್ಮ ಹಂತದಿಂದ ಹಿಡಿದು ಸಮಗ್ರ ಹಂತದವರೆಗೂ ಉಸ್ತುವಾರಿ ನಡೆಯುತ್ತದೆ. ಇದರಿಂದ ಅರ್ಧ ಹಂತದಲ್ಲಿನ ತಿದ್ದುಪಡಿ, ಅನುಷ್ಠಾನದ ತಂತ್ರದ ಪುನರ್ವಿಮರ್ಶೆಯಿಂದ ಉತ್ತಮ ಫಲಿತಾಂಶ, ಇವೆಲ್ಲವೂಗಳನ್ನು ಸಾಧ್ಯವಾಗಿಸ ಬಲ್ಲಂತಹ ವ್ಯವಸ್ಥಿತ ಕಾರ್ಯವಿಧಾನಗಳನ್ನು ಹುಟ್ಟು ಹಾಕಬಹುದಾಗಿದೆ. ಮತ್ತು ಇದರಿಂದ ಈ ನೀತಿಯ ಉದ್ದೇಶಿತ ಗುರಿಗಳನ್ನು ತಲುಪುವುದನ್ನು ವಿಫಲವಾಗಿಸಬಲ್ಲಂತಹ ವ್ಯವಸ್ಥೆಯ ಕಾರ್ಯಚರಣೆಯಲ್ಲಿನ ಲೋಪದೋಷಗಳನ್ನು ಮೊದಲೇ ಪತ್ತೆ ಹಚ್ಚಿ ತಡೆಯಬಹುದಾಗಿರುತ್ತದೆ. ಭಾರತದ ಮುಂದಿನ ಪೀಳಿಗೆಯನ್ನು ರೂಪಿಸುವ ಮತ್ತು ದೇಶಾದ್ಯಂತ ಗುಣಮಟ್ಟದ ಮಾನದಂಡಗಳನ್ನು ಜಾರಿಗೊಳಿಸುವ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯತ್ತ ಭಾರತ ಸಾಗಬೇಕು. ನಿಯಂತ್ರಣವನ್ನು ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಣ ಪ್ರಾಧಿಕಾರದ ಅಡಿಯಲ್ಲಿ ತರಲಾಗುವುದು, ಸಾಮಾನ್ಯ ಶಿಕ್ಷಣ ಮಂಡಳಿಯಡಿಯಲ್ಲಿ ಪ್ರಮಾಣಿತ ಸೆಟ್ಟಿಂಗ್ ಮತ್ತು ಉನ್ನತ ಶಿಕ್ಷಣ ಧನಸಹಾಯ ಮಂಡಳಿಯಡಿಯಲ್ಲಿ ಧನಸಹಾಯವನ್ನು ಮರುಪರಿಶೀಲಿಸುವ ಅಗತ್ಯವಿರುತ್ತದೆ, ಇದರಿಂದಾಗಿ ಭಾರತದ ಉನ್ನತ ಶಿಕ್ಷಣ ಆಯೋಗದ ಪ್ರಸ್ತುತ ನೀತಿಯೊಂದಿಗೆ ಒಳಗೊಳ್ಳುತ್ತದೆ. ಪಾಲಿ, ಪ್ರಾಕೃತ ಮತ್ತು ಪರ್ಷಿಯನ್ ಭಾಷೆಗಳಿಗೆ ಹೊಸ ಸಂಸ್ಥೆಗಳನ್ನು ಸ್ಥಾಪಿಸುವುದು ಒಂದು ಹೊಸ ಉಪಾಯವಾಗಿದ್ದು, ಮೈಸೂರಿನಲ್ಲಿರುವ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥೆಯನ್ನು ಬಲಪಡಿಸುವುದು ಮತ್ತು ಈ ಭಾಷೆಗಳನ್ನು ನೋಡಿಕೊಳ್ಳುವ ವಿಸ್ತೃತ ಆದೇಶದೊಂದಿಗೆ ವಿಶ್ವವಿದ್ಯಾಲಯಕ್ಕೆ ನವೀಕರಿಸುವುದು ಉತ್ತಮ ಆಯ್ಕೆಯಾಗಿದೆ.

**ಉಪಸಂಹಾರ**

ಇಂದು ನಾವು ಜಾಗತೀಕರಣದ ಯುಗದಲ್ಲಿದ್ದೇವೆ.

ಜಾಗತೀಕರಣ– ಅಡ್ಡ ಗೋಡೆಯ ಮೇಲಿನ ದೀಪದಂತೆ – ನಮಗೆ ಒಳ್ಳಯದೋ? ಕೆಟ್ಟದ್ದೋ? ಇದು ಭಾರತದ ಮೇಲೆ ಮಿಶ್ರ ಪರಿಣಾಮ ಬೀರುತ್ತಿದೆ. ಹೇಳಬೇಕೆಂದರೆ ಋಣಾತ್ಮಕತೆಯತ್ತ ವಾಲಿದೆ. ಉತ್ಪಾದನಾ ನೆಲೆ ಕಡಿಮೆಯಾಗುತ್ತಿದೆ. ವೃತ್ತಿ ಸನ್ನಿವೇಶಗಳು ಗಮನಾರ್ಹವಾಗಿ ಬದಲಾಗುತ್ತಿದೆ. ಆರ್ಥಿಕ ಹಿಂಜರಿತದ ಕಾರಣ ಉದ್ಯೋಗಗಳ ಸಂಖ್ಯೆ ಕಡಿಮೆಯಾಗಿವೆ. ಆದರೆ, ಮುಂದಿನ ಕೆಲವು ದಶಕಗಳಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಗೆ ದಿಕ್ಸೂಚಿ ಬದಲಾಗಲಿದೆ. ಕೆಲವು ವರ್ಷಗಳಲ್ಲಿಯೇ ಉನ್ನತ ಶಿಕ್ಷಣದ ಎಲ್ಲಾ ವಿಭಾಗಗಳ "ಮಹಾಸಂಗಮ" ಏರ್ಪಟ್ಟು ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣ ವ್ಯವಸ್ಥೆ ಸ್ಥಾಪಿತವಾಗಲಿದೆ. ಕೌಶಲ್ಯ ಆಧಾರಿತ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ.

**ಪರಾಮರ್ಶನ ಗ್ರಂಥಗಳು**


1. ರಾಷ್ಟ್ರೀಯ ಶಿಕ್ಷಣ ನೀತಿ–_2020.
2. https;//kn.m.wikipedia.org.
3. https;//ww.education.gov.in
4. ಪ್ರಜಾವಾಣಿ ದಿನಪತ್ರಿಕೆ;2021.
5. ವಿಜಯ ಕರ್ನಾಟಕ ದಿನಪತ್ರಿಕೆ;2020–2021.